



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –34 ದಿನಾಂಕ : 05–03–2025


**ದಿನಾಂಕ: 05.03.2025 ರಂದು ವಿಶೇಷ ದಿನ. ರೋಟರಿ ಗವರ್ನರ್‌ರವರ ಅಧಿಕೃತ ಭೇಟಿಯ ಹಿನ್ನೆಲೆಯಲ್ಲಿ ಜೋನ್ 10 ರ ಸಹಾಯಕ ಗವರ್ನರ್ ರೊ. ಎಸ್.ಆರ್. ನಾಗರಾಜ್‌ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕ್ಲಬ್ ಅಸೆಂಬ್ಲಿ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಜೋನ್ ಟ್ರೈನರ್ ಹಾಗೂ ಮಾಜಿ ಸಹಾಯಕ ಗವರ್ನರ್ ರೊ.ರವೀಂದ್ರನಾಥ್ ಐತಾಳ್‌ರವರು ಆಗಮಿಸಿದ್ದರು. ಇವರೊಂದಿಗೆ ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ. ಕೆ. ಸೂರ್ಯ ನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವೇದಿಕೆಯಲ್ಲಿದ್ದು, ಸಹಾಯಕ ಗವರ್ನರ್‌ರವರು ಕ್ಲಬ್‌ನ ದಾಖಲೆಗಳ ಪರಿಶೀಲನೆಯಲ್ಲಿ ಸಹಕರಿಸಿದರು.**










ಅಂದಿನ ಸಭೆಯಲ್ಲಿ ರೊ. ಭಾರ್ಗವಿ ಭಟ್‌ರವರು "ವಿದ್ಯಾಧಿಪತಿ ದೇವ ಗಣಪತಿ" ಎಂಬ ಗೀತೆಯೊಂದಿಗೆ ಪ್ರಾರ್ಥನೆ ಮಾಡಿದರು. ಕ್ಲಬ್ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ರೊ. ಎನ್.ವಿ.ಭಟ್‌ರವರು ರೋಟರಿ ನ್ಯೂಸ್ ಪತ್ರಿಕೆಯಲ್ಲಿ ಬಂದ ಮಾಹಿತಿಯಂತೆ ಮನುಷ್ಯ ಪ್ರಕೃತಿ ನಡುವಿನ 3 ನೇ ಯುದ್ಧ ಪ್ರಾರಂಭವಾಗಿದೆ. ಪ್ರಕೃತಿಯ ಅಸಮತೋಲನದಿಂದ ಈ ಸಾಲಿನಲ್ಲಿ 1 ಕೋಟಿ ಜನ ಮೃತರಾಗುತ್ತಾರೆ ಎಂಬುದರ ಉಲ್ಲೇಖವಿರುವುದನ್ನು ವಿವರಿಸಿದರು ಮತ್ತು ಅದನ್ನು ಸದಸ್ಯರು ಓದಬೇಕೆಂದು ಮನವಿ ಮಾಡಿದರು. ರೊ. ವೈ. ಗೋಪಾಲಕೃಷ್ಣ ಗುಪ್ತರವರು ಮುಖ್ಯ ಅತಿಥಿಗಳಾದ ರೊ. ಎಸ್. ಆರ್. ನಾಗರಾಜ್‌ರವರ ಪರಿಚಯವನ್ನು ಮಾಡಿಕೊಟ್ಟರು.

ಜಿಲ್ಲಾಟ್ರೈನರ್ ರೊ. ರವೀಂದ್ರನಾಥ ಐತಾಳರು ಮಾತನಾಡಿ, ಗವರ್ನರ್ ಬರುವ ಮುಂಚೆ ಪೂರ್ವಭಾವಿ ತಯಾರಿಯನ್ನು ಮಾಡಿಕೊಳ್ಳಬೇಕು. ಅಧ್ಯಕ್ಷರು, ಕಾರ್ಯದರ್ಶಿ, ಮುಂದಿನ ಸಾಲಿನ ಅಧ್ಯಕ್ಷರು ಮತ್ತು ಸಹಾಯಕ ಗವರ್ನರ್‌ರವರೊಂದಿಗೆ ಸಭೆ ಇರುತ್ತದೆ. ರೋಟರಿ ನಡೆದು ಬಂದದಾರಿ ಮತ್ತು ಅದರ ಘನತೆಯನ್ನು ಎತ್ತಿ ಹಿಡಿಯುವ ಬಗ್ಗೆ ಶ್ರಮಿಸಬೇಕು. ರೋಟರಿಯು ಮಾನವೀಯ ಕಾರ್ಯ ಮಾಡುತ್ತಿದೆ ಎಂಬುದು ಸಾರ್ವಜನಿಕರಿಗೆ ಮನದಟ್ಟು ಆಗುವಂತೆ ನಮ್ಮ ಕಾರ್ಯಕ್ರಮವಿರಬೇಕು. ಅಂದರೆ ರೋಟರಿ ಇಮೇಜ್ ಚೆನ್ನಾಗಿರಬೇಕು ಎಂದರು.

ಸಹಾಯಕ ಗವರ್ನರ್‌ರವರಾದ ರೊ.ಎಸ್.ಆರ್. ನಾಗರಾಜ್ ರವರು ಮಾತನಾಡಿ, ಅಂದು ಜಿಲ್ಲಾ ಗವರ್ನರ್ ಒಬ್ಬರೇ ಮುಖ್ಯ ಅತಿಥಿಗಳಾಗಿರಬೇಕು. ಬೇರೆ ಯಾರನ್ನೂ ಕೂಡ ಮುಖ್ಯ ಅತಿಥಿಗಳಾಗಿ ಆಹ್ವಾನಿಸಬಾರದು ಎಂದು ತಿಳಿಸಿ, ಅಂದಿನ ಕಾರ್ಯಕ್ರಮದ ಬಗ್ಗೆ ವಿವರಿಸಿದರು. ಒಟ್ಟು ವರ್ಷದಲ್ಲಿ 6 ಕ್ಲಬ್ ಅಸೆಂಬ್ಲಿಗಳಾಗಬೇಕು. ಪೂರ್ವಭಾವಿ ಸಭೆ ಕರೆದು ಅಂದಿನ ಕಾರ್ಯಕ್ರಮದ ಯೋಜನೆಯನ್ನು ಮಾಡಬೇಕು. ಅಂದು ಹಬ್ಬದ ವಾತಾವರಣವನ್ನು ನಿರ್ಮಿಸಿ ಚಂದಗಾಣಿಸುವಂತೆ ಮಾಡಬೇಕು ಎಂದರು. ಅವರು ಮುಂದುವರೆದು ಚೆಕ್‌ಲಿಸ್ಟ್ ಪ್ರಕಾರ, ಇರುವ ದಾಖಲೆಗಳ ಬಗ್ಗೆ ಕೇಳಿ ವಿವರಣೆ ಪಡೆದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ: 12–03–2025, ಬುಧವಾರ ಸಂಜೆ 6:45 ರಿಂದ**

**Chief Guest :**

**Dr. Shekar Gowler**

**Retired Principal**

**Topic :**

**Rain Water Harvesting**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ







ಕ್ಲಬ್ ಸರ್ವಿಸ್ ನಿರ್ದೇಶಕರಾದ ರೊ. ವೀರಣ್ಣ ಎ. ಹುಗ್ಗಿಯವರು ವೇದಿಕೆಗೆ ಆಗಮಿಸಿ ವಿವರ ನೀಡಿದರು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಎಲ್ಲಾ ರೋಟರಿ ಸದಸ್ಯರು ರೋಟರಿ ಫೌಂಡೇಷನ್‌ಗೆ ದೇಣಿಗೆ ನೀಡಬೇಕು. ಅದಲ್ಲದೇ ಸ್ಪೌಸ್‌ಗಳೂ ಸಹ ದೇಣಿಗೆ ನೀಡಬೇಕೆಂದು ಮನವಿ ಮಾಡಿದರು. ಸಹಾಯಕ ಗವರ್ನರ್‌ರವರು ಮಾತನಾಡಿ, ಈಗಾಗಲೇ ರೋಟರಿ ಫೌಂಡೇಷನ್‌ಗೆ ದೇಣಿಗೆ ನೀಡಿದ್ದೀರಿ. ಆದರೆ ಇನ್ನೂ ಹೆಚ್ಚಿನ ದೇಣಿಗೆಯನ್ನು ನಿರೀಕ್ಷಿಸುತ್ತೇವೆ ಎಂದರು. ಅಂದಿನ ಕ್ಲಬ್ ಅಸೆಂಬ್ಲಿಯಲ್ಲಿ ಎಲ್ಲರೂ ಭಾಗವಹಿಸುವಂತೆ ಮನವಿ ಮಾಡಿದರಲ್ಲದೇ ಗವರ್ನರ್ ಬಂದಾಗ, ಕಾರ್ಯದರ್ಶಿಗಳ ವರದಿ ಸಂಕ್ಷಿಪ್ತವಾಗಿರಬೇಕೆಂದು ತಿಳಿಸಿ, ಹೆಚ್ಚಿನ ಸಮಯ ಗವರ್ನರ್‌ರ ಮಾತಿಗೆ ಕೊಡಬೇಕೆಂದು ಸೂಚನೆ ನೀಡಿದರು. ರೊ. ಡಿ.ಎಲ್. ಮಂಜುನಾಥರವರು ಮಾತನಾಡಿ, ಸಭೆಯನ್ನು ಚೆನ್ನಾಗಿ ಮಾಡಿ, ಗವರ್ನರ್‌ರವರಿಗೆ ಹೆಚ್ಚಿನ ಆದ್ಯತೆ ನೀಡಿ ಎಂದರು. ಗವರ್ನರ್ ಮಾತನಾಡಿದ ನಂತರ ಯಾವುದೇ ಕಾರ್ಯಕ್ರಮ ಬೇಡ ಎಂದರು.

ಸಹಾಯಕ ಗವರ್ನರ್ ರೊ. ಎಸ್. ಆರ್. ನಾಗರಾಜ್‌ರವರು ಮಾತನಾಡಿ, ರೋಟರಿ ಕ್ಲಬ್ ಶಿವಮೊಗ್ಗದ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು ನಮ್ಮ ಈ ಸಾಲಿನಲ್ಲಿ ತುಂಬಾ ಸಹಕಾರ ನೀಡಿದ್ದಾರೆ. ಇತ್ತೀಚೆಗೆ ನಡೆದ ವಿಶ್ವ ಅರಿವಿನ ದಿನಾಚರಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅಲ್ಲದೇ ರಹಲ ಕಾರ್ಯಕ್ರಮದಲ್ಲಿ ಕ್ಲಬ್‌ನ ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ಅತಿಥಿ ಉಪನ್ಯಾಸಕರಾಗಿ ಚೆನ್ನಾಗಿ ಮಾತನಾಡಿದ್ದಾರೆ ಎಂದರು.

ರೊ. ಎಸ್. ಆರ್. ನಾಗರಾಜ್ ಮತ್ತು ರೊ. ರವೀಂದ್ರನಾಥ ಐತಾಳ್‌ರವರಿಗೆ ಮಾಜಿ ಸಹಾಯಕ ಗವರ್ನರ್, ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ. ಹೆಚ್.ಡಿ. ಉದಯಶಂಕರ ಶಾಸ್ತ್ರಿಯವರು ಸನ್ಮಾನಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆ ಮತ್ತು ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರ ಭಾರತ ಮಾತಾಕಿ ಜೈ ಉದ್ಘೋಷದೊಂದಿಗೆ ಸಭೆ ಮುಕ್ತಾಯವಾಯಿತು.

**ದಿನಾಂಕ: 24-02-2025ರಂದು ಬಿ.ಆರ್. ಪ್ರಾಜೆಕ್ಟ್‌ನ ರಾಷ್ಟ್ರೀಯ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ರೋಟರಿ ಜಾಗತಿಕ ಅನುದಾನದಡಿಯಲ್ಲಿ ಅನುಷ್ಠಾನಗೊಂಡಿರುವ ನವೀಕೃತ ಶಾಲಾ ಕಟ್ಟಡ, ಶೌಚಾಲಯ, ಪೀಠೋಪಕರಣಗಳು, ಕಂಪ್ಯೂಟರ್ ತರಗತಿಗಳ ಲೋಕಾರ್ಪಣೆ ಕಾರ್ಯಕ್ರಮ ನೆರವೇರಿತು.**





ದಿನಾಂಕ: 24.02.2025 ರಂದು ಬಿ.ಆರ್ ಪ್ರಾಜೆಕ್ಟ್‌ನಲ್ಲಿರುವ ರಾಷ್ಟ್ರೀಯ ಶಿಕ್ಷಣ ಸಮಿತಿಯ ಪ್ರೌಢಶಾಲೆ ಮತ್ತು ಪಿ.ಯು. ಕಾಲೇಜಿನ ಕಟ್ಟಡದ ನವೀಕರಣ ಮತ್ತು ಇತರೇ ಕಾಮಗಾರಿಗಳು ರೋಟರಿ ಗ್ಲೋಬಲ್ ಗ್ರಾಂಟ್ ಅಡಿಯಲ್ಲಿ ಪುನರ್ ನಿರ್ಮಾಣವಾಗಿದ್ದು, ಅದರ ಲೋಕಾರ್ಪಣ ಕಾರ್ಯಕ್ರಮ ನಡೆಯಿತು. ಅಂದು ರೋಟರಿ ಜಿಲ್ಲೆ 3182 ರ ಜಿಲ್ಲಾ ಗವರ್ನರ್ ರೊ. ದೇವಾನಂದರವರು ಉದ್ಘಾಟಿಸಿದರು ಹಾಗೂ ಲೋಕಾರ್ಪಣೆಗೊಳಿಸಿದರು. ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು, ರಾಷ್ಟ್ರೀಯ ಶಿಕ್ಷಣ ಸಮಿತಿಯ ಅಧ್ಯಕ್ಷರಾದರೊ. ಜಿ.ಎಸ್. ನಾರಾಯಣರಾವ್‌ರವರು, ಕಾರ್ಯದರ್ಶಿ ರೊ. ಎಸ್. ಎನ್. ನಾಗರಾಜ್, ಗ್ಲೋಬಲ್ ಗ್ರಾಂಟ್ ರೂವಾರಿ ರೊ.ಪಿಡಿಜಿ. ಡಾ.ಪಿ.ನಾರಾಯಣ್, ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರು ಹಾಗೂ ಈ ಯೋಜನೆಯ ಸಂಪರ್ಕಾಧಿಕಾರಿಗಳಾದ ರೊ. ಎನ್.ವಿ.ಭಟ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಲಕ್ಕವಳ್ಳಿಯಲ್ಲಿರುವ (ಬಿ.ಆರ್. ಪ್ರಾಜೆಕ್ಟ್) ಪ್ರೌಢಶಾಲೆ ಮತ್ತು ಪಿ.ಯು. ಕಾಲೇಜು ಅನುದಾನಿತ ಶಾಲೆಯಾಗಿದ್ದು, ರಾಷ್ಟ್ರೀಯ ಶಿಕ್ಷಣ ಸಮಿತಿಯಿಂದ (NES) ನಿರ್ವಹಿಸಲಾಗುತ್ತಿದೆ. ಇಲ್ಲಿ 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಸುತ್ತಮುತ್ತಲಿರುವ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಇದೊಂದು ಪ್ರಮುಖ ವಿದ್ಯಾ ಕ್ಷೇತ್ರವಾಗಿದೆ. ಇಲ್ಲಿರುವ ಕಟ್ಟಡ ಹಳೆಯದಾಗಿದ್ದು, ಸರಿಯಾದ ಶೌಚಾಲಯದ ವ್ಯವಸ್ಥೆ ಇರಲಿಲ್ಲ. ಇದನ್ನು ಮನಗಂಡ ರೋಟರಿ ಕ್ಲಬ್ ಶಿವಮೊಗ್ಗದವರು ರಾಷ್ಟ್ರೀಯ













ಶಿಕ್ಷಣ ಸಮಿತಿಯೊಂದಿಗೆ ಕೈಜೋಡಿಸಿ ನವೀಕೃತ ಕಟ್ಟಡ ನಿರ್ಮಿಸಲು 2022–23 ನೇ ಸಾಲಿನ ಅಧ್ಯಕ್ಷರಾದ ರೊ. ಎನ್.ವಿ. ಭಟ್‌ರವರು ಹಾಗೂ ರೊ.ಪಿಡಿಜಿ. ಡಾ. ಪಿ.ನಾರಾಯಣರವರ ಪರಿಶ್ರಮದಿಂದ ಪುನರ್ ನಿರ್ಮಿಸಲು ರೋಟರಿಯ ಜಾಗತಿಕ ಅನುದಾನ ಪಡೆಯಲಾಯಿತು.

ಅಮೇರಿಕಾದ ವೆಸ್ಟ್ ಸ್ಪ್ರಿಂಗ್ ಫೀಲ್ಡ್ ರೋಟರಿ ಕ್ಲಬ್ ಕೈಜೋಡಿಸಿ, ರೋಟರಿ ಜಿಲ್ಲೆ 7450 ರೊಂದಿಗೆ ಸೇರಿ 12300 ಡಾಲರ್ ಹಣ ದೊರೆಯಿತು. ರೋಟರಿ ಫೌಂಡೇಷನ್ 9600 ಡಾಲರ್ ಹಾಗೂ ರೋಟರಿ ಜಿಲ್ಲೆ 3182 6000 ಡಾಲರ್ ಹಾಗೂ ರೋಟರಿ ಕ್ಲಬ್ ಶಿವಮೊಗ್ಗದಿಂದ 13018.95 ಡಾಲರ್‌ಗಳ ಅನುದಾನ ಸೇರಿ ಒಟ್ಟು 39,999 ಡಾಲರ್ ಅಂದರೆ ರೂ. 33,20,000.00 ಮೊಬಲಗಿನ ಅನುದಾನದೊಂದಿಗೆ ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಲಾಗಿದೆ.

1) ಹಾಲಿ ಇರುವ ಸಣ್ಣ ಕೊಠಡಿಗಳ ಮಧ್ಯೆ ಇರುವ ಗೋಡೆ ತೆಗೆದು ದೊಡ್ಡದಾದ ಕೊಠಡಿ ನಿರ್ಮಿಸಲಾಗಿದೆ.
2) ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದೆ.
3) 20 ಕಂಪ್ಯೂಟರನ್ನೊಳಗೊಂಡಂತೆ ಕಂಪ್ಯೂಟರ್ ಲ್ಯಾಬ್ ನಿರ್ಮಿಸಲಾಗಿದೆ.
4) ಎಲ್ಲಾ ಶಾಲಾ ಕೊಠಡಿಗಳಿಗೆ ಹೊಸದಾಗಿ ಬೆಂಚ್ ಹಾಗೂ ಡೆಸ್ಕ್‌ಗಳನ್ನು ಜೋಡಿಸಲಾಗಿದೆ.
5) ಕೊಠಡಿಗಳಿಗೆ ಹೊಸದಾಗಿ ನೆಲಹಾಸು ಒದಗಿಸಲಾಗಿದೆ.
6) ಶಾಲಾ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಇದಲ್ಲದೇ ರಾಷ್ಟ್ರೀಯ ಶಿಕ್ಷಣ ಸಮಿತಿಯ ವತಿಯಿಂದ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ.

ಈ ಸಂಪೂರ್ಣ ಸುಸಜ್ಜಿತ ಕಟ್ಟಡವನ್ನು ದಿನಾಂಕ: 24.02.2025 ರಂದು ರೋಟರಿ 3182ರ ಜಿಲ್ಲಾ ಗವರ್ನರ್ ಆದ ರೊ. ದೇವಾನಂದರವರು ಲೋಕಾರ್ಪಣೆ ಕಾರ್ಯವನ್ನು ನೆರವೇರಿಸಿದರು. ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ರೊ.ಎಸ್.ಎನ್. ನಾಗರಾಜ್‌ರವರು ಎಲ್ಲರನ್ನು ಸ್ವಾಗತಿಸಿ, ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳು ಹಾಗೂ ಅಂದಿನ ಕಾರ್ಯಕ್ರಮದ ಪ್ರಸ್ತಾವನೆಯನ್ನು ಮಾಡಿದರು. ರೊ.ಪಿಡಿಜಿ. ಡಾ.ಪಿ. ನಾರಾಯಣರವರು ಗ್ಲೋಬಲ್ ಗ್ರಾಂಟ್ ಯೋಜನೆಯ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಜಿ.ಎಸ್. ನಾರಾಯಣರಾವ್, ಶ್ರೀ ನಾಗೇಂದ್ರಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಭಾಗವಹಿಸಿದ್ದರು. ರೊ. ಕೆ. ಸೂರ್ಯನಾರಾಯಣ ಉಡುಪರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು, ಕಾರ್ಯದರ್ಶಿ ರೊ.ಎನ್.ಜಿ. ಉಷಾ ಹಾಗೂ ಯೋಜನೆಯ ಸಂಪರ್ಕಾಧಿಕಾರಿ ರೊ.ಎನ್.ವಿ.ಭಟ್ ಉಪಸ್ಥಿತರಿದ್ದರು. ❖

## *Happy Birthday Wishes*


*Sunitha V.*
*06th March*


*Gopinath N.*
*07th March*


*Dattatri S.*
*08th March*


*Dr. Mythili*
*08th March*


*Dr.Shobha Girish*
*10th March*





## ಸಂಪಾದಕೀಯ

**ಹೊಂದಾಣಿಕೆ....**

ಪೂರ್ವಿಕರಿಂದ ಅವನಿಗೆ ಬಳುವಳಿಯಾಗಿ ಬಂದ ಮನೆ ನಗರದ ಮಧ್ಯಭಾಗದಲ್ಲಿತ್ತು. ಹಳೇ ಮೇಜು, ಕುರ್ಚಿ ಎಲ್ಲವೂ ಮನೆಗೆ ಒಂದು ಶೋಭೆಯನ್ನು ನೀಡಿದ್ದವು. ಇದ್ದಕ್ಕಿದ್ದ ಹಾಗೆ ಒಂದು ದಿನ ಅವನಿಗೆ ಆ ಮನೆಯನ್ನು ಹೊಸದಾಗಿಸಬೇಕು ಎನ್ನುವ ಆಸೆ ಹುಟ್ಟಿಕೊಂಡಿತು. ಸೋಫಾ ಕುರ್ಚಿ ಮೇಜು ಕಡೆಗೆ ಕಿಟಕಿಯ ಪರದೆ ಹೀಗೆ ಮನೆಯಲ್ಲಿರುವ ಎಲ್ಲವನ್ನೂ ಬದಲಿಸುತ್ತಾ ಆಧುನಿಕವಾಗಿಸುತ್ತಾ ಹೋದ. ಅದೊಂದು ರೀತಿಯಲ್ಲಿ ಆಟವಾಗಿಬಿಟ್ಟಿತ್ತು. ಹೊಸದಾಗಿ ತಂದ ವಸ್ತುಗಳೆಲ್ಲವೂ ಹೊಳೆಯುತ್ತಿದ್ದರೆ ಬಣ್ಣ ಕಳೆದ ಗೋಡೆಗಳು ಮಂಕಾಗಿ, ಹೊಸದಾಗಿ ಬಣ್ಣ ಬಳಿಸಿದ. ಆದರೂ ಅವನ ಮನಸ್ಸಿಗೆ ಸಮಾಧಾನವಿಲ್ಲ. ಎಲ್ಲೋ ಏನೋ ಸರಿಯಾಗಲಿಲ್ಲ ಎನ್ನಿಸತೊಡಗಿತು. ಮತ್ತೆ ಮತ್ತೆ ನೋಡಿದ ಇದ್ದಕ್ಕಿದ್ದ ಹಾಗೆ ಹೊಳೆದದ್ದು ತಂದ ವಸ್ತುಗಳಿಗೂ, ಇರುವ ಗೋಡೆಗಳಿಗೂ ಸಂಬಂಧವೇ ಇಲ್ಲ. ಈಗ ಜರೂರಿರುವುದು ಗೋಡೆಗಳನ್ನೇ ಬದಲಿಸುವುದು ಎನ್ನಿಸಿಬಿಟ್ಟಿತ್ತು.

ಒಂದೊಂದೇ ಗೋಡೆಗಳನ್ನು ಬದಲಿಸಿದ. ಅಷ್ಟಕ್ಕೂ ಸಮಾಧಾನ ಆಗಲೇ ಇಲ್ಲ. ಇಡೀ ಮನೆ ಯಾಕೋ ಪ್ರಸ್ತುತ ಅನ್ನಿಸದೆ ಪೂರ್ಣವಾಗಿ ತೆಗೆಯುವುದೇ ಸರಿ ಅನ್ನಿಸಿ ತನ್ನ ಇಚ್ಛೆಗೆ ತಕ್ಕಂತೆ ಹೊಸದಾಗಿ ಕಟ್ಟಿಸಿದ. ಅಷ್ಟು ಹೊತ್ತಿಗೆ ಅವನ ಹತ್ತಿರವಿದ್ದ ಎಲ್ಲ ಹಣವೂ ಖರ್ಚಾಗಿಹೋಗಿತ್ತು. ಆದರೂ ಮನೆ ಈಗ ಆ ರಸ್ತೆಯ ಎಲ್ಲ ಮನೆಗಳಿಗಿಂತಲೂ ಸೊಗಸಾಗಿ ಕಾಣುತ್ತಿತ್ತು. ಸುಖ ಕಾಣಲು ಒಂದಿಷ್ಟು ಕಳೆದುಕೊಳ್ಳಲೇ ಬೇಕಲ್ಲ. ಹಣ ಕಳೆದುಕೊಂಡರೂ, ಹೋಗಿ ಬರುವವರೆಲ್ಲಾ ಮನೆಯನ್ನು ಹೊಗಳುವುದು ಅವನ ಕಿವಿಗೆ ಹಿತವಾಗಿ, ತಾನು ಮನೆ ಕಟ್ಟಿದ್ದಕ್ಕೆ ಸಾರ್ಥಕ ಅನ್ನಿಸಿತೊಡಗಿತ್ತು.

ಸ್ವಲ್ಪ ದಿನ ಅಷ್ಟೇ ಮತ್ತೆ ಅವನಿಗೆ ಅಸಮಾಧಾನ ತಲೆ ಎತ್ತಿತ್ತು. ಅವನ ಅಸಮಾಧಾನ ಈಗ ತನ್ನ ಮನೆಯ ಮೇಲಲ್ಲ. ಇಷ್ಟು ಚೆಂದದ ತನ್ನ ಮನೆಗೆ ತಕ್ಕುದಾದ ಬೀದಿಯೇ ಇದಲ್ಲ ಒಂದಕ್ಕೊಂದು ಹೊಂದಾಣಿಕೆಯೇ ಆಗುತ್ತಿಲ್ಲ. ಛೇ ಎಂಥಾ ಕೆಟ್ಟ ಬೀದಿಯಲ್ಲಿ ತಾನಿದ್ದೇನಲ್ಲಾ ಎನ್ನಿಸಿ ಬೀದಿಯನ್ನು ಬದಲಿಸಬೇಕು ಅನ್ನಿಸತೊಡಗಿತು. 'ಪೂರ್ವಿಕರು ಕಟ್ಟಿದ ನನ್ನ ಮನೆಯನ್ನೇನೋ ಒಡೆದೆ, ತನಗೆ ಹೇಗೆ ಬೇಕೋ ಹಾಗೆ ಕಟ್ಟಿ, ಆಧುನಿಕತೆಗೊಳಿಸಿದೆ. ಅದು ನನ್ನದು, ಆದರೆ ಬೀದಿಯನ್ನೇನು ಮಾಡಲಿ? ಅದು ಸಾರ್ವಜನಿಕರದ್ದು. ಅದನ್ನು ಬದಲಿಸಲು ಸಾಧ್ಯವೇ ಇಲ್ಲ. ಆದರೆ ಒಂದಂತೂ ಸತ್ಯ ಇಂಥಾ ಚಂದದ ಮನೆ ಈ ಬೀದಿಯಲ್ಲಿರುವುದೇ ವ್ಯರ್ಥ. ಇಷ್ಟೆಲ್ಲಾ ಪ್ರಯತ್ನಪಟ್ಟು ಅತ್ಯುತ್ತಮ ಮನೆಯನ್ನು ಕಟ್ಟಿದ ನನ್ನ ಕಷ್ಟಕ್ಕೆ ಈ ಬೀದಿಯಿಂದಾಗಿ ಬೆಲೆಯೇ ಇಲ್ಲದಂತಾಗಿಬಿಟ್ಟಿತಲ್ಲ' ಎನ್ನುವ ಕೊರಗು ಅವನನ್ನು ಬಾಧಿಸತೊಡಗಿತು.

ನಾನು ಬದಲಾದೆ ಎಂದರೆ ನನ್ನ ಸುತ್ತಲಿರುವವರು ಬದಲಾದರು ಎಂದಲ್ಲ. ಅವರನ್ನು ಬದಲಿಸುವುದೂ ಸಾಧ್ಯವಿಲ್ಲ. ಹಾಗೆ ಬದಲಾದರೂ ಎಲ್ಲವೂ ಸರಿಯಾಗುತ್ತದೆ ಅಂತಲೂ ಅಲ್ಲ. ಎಲ್ಲದರ ನಡುವೆ ಇರುವುದು ಅನಿವಾರ್ಯ ಎನ್ನುವುದನ್ನು ತಿಳಿಯಬೇಕು. ಎಲ್ಲದರ ನಡುವೆ ಬದುಕುತ್ತೇನೆನ್ನುವ ಮನಸ್ಸಿನ ಹದವೇ ಬಹಳ ದೊಡ್ಡದು. ಒಮ್ಮೊಮ್ಮೆ ಸಣ್ಣ ಯೋಚನೆ ಎಲ್ಲವನ್ನೂ ಬದಲಿಸಬಹುದು. ಬದಲಿಸಲಾಗದೆಯೂ ಇರಬಹುದು. ಬದಲಿಸಲಾಗದೇ ಇದ್ದುದಕ್ಕೆ ಕೊರಗುವುದರಲ್ಲಿ ಅರ್ಥವಿಲ್ಲ. ಅದರ ಬಗ್ಗೆಯೇ ಯೋಚಿಸುತ್ತಾ ಉಳಿದರೆ ಮನಸ್ಸಿನ ಕಷ್ಟಕ್ಕೆ ಕೊನೆಯೂ ಇರುವುದಿಲ್ಲ. ಹೊಂದಿಕೊಂಡರೆ ಮಾತ್ರ ಜೀವನ ಸುಗಮ.

ಬನ್ನಿ... ಹೊಂದಿಕೊಂಡು ಬಾಳುವುದನ್ನು ಕಲಿಯೋಣ...

**ರೊ. ಎಂ. ಮಾಧವಾಚಾರ್**

## ಮಹಿಳಾ ನಾಟಕೋತ್ಸವ – ಕಲಾ ಸಿಂಚನ

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ನಮ್ಮ ರೋಟರಿ ಕ್ಲಬ್‌ನ ವತಿಯಿಂದ ಮಾರ್ಚ್ 28 ರಂದು ಮಹಿಳಾ ನಾಟಕೋತ್ಸವ–ಕಲಾ ಸಿಂಚನ ಸ್ಪರ್ಧೆ ಏರ್ಪಡಿಸಲಾಗಿದೆ. ಮಹಿಳೆಯರಿಗಾಗಿ ನಾಟಕ ಸ್ಪರ್ಧೆ, ಹಾಸ್ಯ–ಸ್ವಾರಸ್ಯ ಕಾರ್ಯಕ್ರಮಗಳಿರುತ್ತವೆ. ವಿವರ ಮುಂದಿನ ಪತ್ರಿಕೆಯಲ್ಲಿ ನೀಡಲಾಗುವುದು.**

## ಗಮನಿಸಿ...

**ರೋಟರಿ ಯುವಕೇಂದ್ರಕ್ಕೆ ರೂ. 50,000 ಅಥವಾ ಅದಕ್ಕಿಂತ ಹೆಚ್ಚು ದೇಣಿಗೆ ಕೊಟ್ಟವರ ಹೆಸರನ್ನು ಕ್ಲಬ್‌ನ ಸಭಾಂಗಣದ ಆವರಣದಲ್ಲಿ ಪ್ರದರ್ಶಿಸಲಾಗುವುದು ಎಂದು ಸೆಂಟಿನರಿ ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿಗಳಾದ ರೊ. ಎನ್. ಎಸ್. ಶ್ರೀಧರ್‌ರವರು ತಿಳಿಸಿರುತ್ತಾರೆ.**

## ಮುಂದಿನವಾರ ಹಿಂದೂಡಿದ ಸಭೆಯ ವಿಶೇಷ ಕಾರ್ಯಕ್ರಮ

ದಿನಾಂಕ: 17-03-2025, ಸೋಮವಾರದಂದು ನಮ್ಮ ಜಿಲ್ಲಾ ಗವರ್ನರ್ ರೊ. ದೇವ್ ಆನಂದ್‌ರವರು ನಮ್ಮ ಕ್ಲಬ್‌ಗೆ ಅಧಿಕೃತ ಭೇಟಿ ಕಾರ್ಯಕ್ರಮವಿದೆ.

ಆ ದಿನ ಸಂಜೆ 7:00ಕ್ಕೆ ವಿಶೇಷವಾದ ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮವಿರುತ್ತದೆ. ಎಲ್ಲಾ ಸದಸ್ಯರು ಕುಟುಂಬ ಸಮೇತರಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

(ದಿನಾಂಕ: 19-03-2025, ಬುಧವಾರದ ವಾರದ ಸಭೆ ಇರುವುದಿಲ್ಲ.)

– ರೊ. ಕೆ. ಸೂರ್ಯನಾರಾಯಣ ಉಡುಪ

## ಚಿಂತನ



ಸಂಪತ್ತು ಎಷ್ಟೇ ಇದ್ದರೂ
ಸರಳತೆ ಮಾತ್ರ ಮನುಷ್ಯನಿಗೆ
ಒಳ್ಳೆಯ ಗೌರವ ತಂದು ಕೊಡುತ್ತೆ,
ಸಂಪತ್ತಿಗೆ ಬೆಲೆ ಕಟ್ಟಬಹುದು,
ಸರಳತೆಗೆ ಬೆಲೆಕಟ್ಟಲಾಗದು.

– ರೊ. ಕೆ. ಸೂರ್ಯನಾರಾಯಣ ಉಡುಪ

To, *Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495